ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 24.04.2025.

**ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ ಡಿ.ಹೆಚ್.ಹೆಚ್. ವಕೀಲರಿಂದಃ

ಪ್ರತಿವಾದಿ ನನ್ನ ದೂರದ ಸಂಬಂಧಿಯಾಗಬೇಕು ಹಾಗೂ ನಾನು ಮತ್ತು ಪ್ರತಿವಾದಿ ಒಂದೇ ಜಾತಿಯವರು ಇರುತ್ತೇವೆ. ನನ್ನ ಹಾಗೂ ಪ್ರತಿವಾದಿಯ ಮಧ್ಯ ಯಾವುದೇ ನೆಂಟಸ್ಥಿಕೆ ಅಗಿಲ್ಲ ಎಂದರೆ ಸರಿ. ನಾನು ಈ ದಾವೆ ಸಲ್ಲಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ನಾನು ನಮ್ಮ ವಕೀಲರಿಗೆ ಬೀಗರು ಅಂತ ಹೇಳಿಲ್ಲ, ಆದರೆ ದೂರದ ಸಂಬಂಧಿ ಎಂದು ಹೇಳಿರುತ್ತೇನೆ. ಪ್ರತಿವಾದಿಗೆ ಇಬ್ಬರು ಅಣ್ಣ-ತಮ್ಮಂದಿರು ಇರುತ್ತಾರೆ, ಅದೇ ರೀತಿ ತಂದೆ-ತಾಯಿ ಕೂಡಾ ಇರುತ್ತಾರೆ. ಪ್ರತಿವಾದಿ ಮತ್ತು ಆತನ ಸಹೋದರರಿನಿಗೆ ಎಷ್ಟು ಜನ ಮಕ್ಕಳು ಇರುತ್ತಾರೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ಪ್ರತಿವಾದಿಗೆ ದಾವಾ ಸ್ವತ್ತು ತನ್ನ ಹಿರಿಯರಿಂದ ಬಂದಿರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಗೆ ಮತ್ತು ಆತನ ಎಲ್ಲ ಕುಟುಂಬದ ಸದಸ್ಯರಿಗೆ ಸಮನಾದ ಹಕ್ಕು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿ ತನ್ನ ಕುಟುಂಬದ ಅಡೆಚಣೆ ಸಲುವಾಗಿ ಅಂದರೆ ಮದುವೆ ಸಂಬಂಧ ಸಾಲವಾಗಿದ್ದರಿಂದ ದಾವಾ ಸ್ವತ್ತುನ್ನು ಮಾರಾಟ ಮಾಡುವುದು ಇದೆ ಎಂದು ನನಗೆ ಹೇಳಿರುತ್ತಾರೆ. ಪ್ರತಿವಾದಿ ತಾಯಿ ಮಾತ್ರ ಹೇಳಿರುತ್ತಾರೆ, ಪ್ರತಿವಾದಿ ಹೇಳಿಲ್ಲ ಎಂದರೆ ಸರಿಯಲ್ಲ. ಸದರಿ ವಿಷಯವನ್ನು ನನಗೆ ಪ್ರತಿವಾದಿ ಮತ್ತು ಆತನ ತಾಯಿ ತಮ್ಮ ಕರೆಯಿಸಿ ಹೇಳಿರುತ್ತಾರೆ. ನನ್ನ ಹಾಗೂ ಪ್ರತಿವಾದಿ ಮನೆ ನಿಪಿ-1 ಆಗುವ ಕಾಲಕ್ಕೆ ಹತ್ತಿರನೇ ಇತ್ತು. 2021ರ ಜೂನ್ ತಿಂಗಳಲ್ಲಿ ಪ್ರತಿವಾದಿ ಮತ್ತು ಆತನ ತಾಯಿ ನನ್ನನ್ನು ತಮ್ಮ ಮನೆಗೆ ಕರೆಯಿಸಿಕೊಂಡಿದ್ದರು. ಪ್ರತಿವಾದಿ ಮನೆಗೆ ನಾನು ಮತ್ತು ನನ್ನ ಗಂಡ ಹಾಗೂ ರೇವಣಸಿದ್ದಪ್ಪ ರವರು ಹೋಗಿದ್ದೇವೆ. ಸದರಿ ರೇವಣಸಿದ್ದಪ್ಪ ನನ್ನ ಗಂಡನ ಸ್ನೇಹಿತ ಇರುತ್ತಾರೆ. ನಿಪಿ-1 ಆಗುವುದಕ್ಕಿಂತ ಮುಂಚೆ ನನ್ನ ಮತ್ತು ಪ್ರತಿವಾದಿ ಮಧ್ಯ ಯಾವುದೇ ಹಣಕಾಸಿನ ವ್ಯವಹಾರ ಇರಲಿಲ್ಲ, ಆದರೆ ನಾನು ಪ್ರತಿವಾದಿ ಮನೆಗೆ ಹಾಲು ತರಲು ಹೋಗುತ್ತಿದ್ದೆ.

ನಾನು ಮತ್ತು ನನ್ನ ಗಂಡ ಹಾಗೂ ರೇವಣಸಿದ್ದಪ್ಪ ರವರು ಪ್ರತಿವಾದಿ ಮನೆಗೆ ಹೋದಾಗ ಯಾವುದೇ ಕಾಗದ ಪತ್ರ ಬರೆದಿರುವುದಿಲ್ಲ, ಹಾಗೇ ಬಾಯಿಮಾತಿನಿಂದ ಮಾತುಕತೆಯಾಗಿರುತ್ತದೆ. ಪ್ರತಿವಾದಿ ತಮ್ಮ ಜಮೀನನ್ನು ಒಟ್ಟು ರೂ.11 ಲಕ್ಷಕ್ಕೆ ಮಾರಾಟ ಮಾಡುತ್ತೇವೆ ಎಂದು ಹೇಳಿದ್ದರು, ಅದಕ್ಕೆ ನಾವು ಒಪ್ಪಿಕೊಂಡಿದ್ದೇವು. ವ್ಯವಹಾರ ಆಗುವ ಕಾಲಕ್ಕೆ ಪ್ರತಿ ಎಕರೆಗೆ ಎಷ್ಟು ಮಾರುಕಟ್ಟೆ ಬೆಲೆ ಇದೆ ಎಂದು ನಾನು ಪರಿಶೀಲನೆ ಮಾಡಿರುವುದಿಲ್ಲ. ನಾನು ಪ್ರತಿವಾದಿ ಜೊತೆ ವ್ಯವಹಾರ ಮಾಡಿಕೊಳ್ಳುವ ಕಾಲಕ್ಕೆ ಪ್ರತಿ ಎರಕೆಗೆ ರೂ.10 ಲಕ್ಷಕ್ಕೆ ಬೆಲೆ ಬಾಳುತ್ತಿತ್ತು ಎಂದರೆ ಸರಿಯಲ್ಲ. ಪ್ರತಿವಾದಿಗೆ ಮಾತುಕತೆಯಾದಾಗ ರೂ.4 ಲಕ್ಷ ಕೊಟ್ಟಿರುತ್ತೇವೆ. ತದನಂತರ 2021 ನವೆಂಬರ್ ತಿಂಗಳಲ್ಲಿ ಪುನಃ ನನ್ನಿಂದ ರೂ.5 ಲಕ್ಷ ಹಣ ಪಡೆದಿರುತ್ತಾರೆ. ನಂತರ ಪ್ರತಿವಾದಿಗೆ ನೋಂದಣಿ ಕ್ರಯ ಪತ್ರ ಬರೆದುಕೊಡಿ ಎಂದು ವಿನಂತಿಸಿಕೊಂಡಿರುತ್ತೇವೆ. ಆಗ ಪ್ರತಿವಾದಿ ಸತಾಯಿಸಿದ್ದರಿಂದ ಹಾಗೂ ನಿಪಿ-1 ದಾಖಲೆ ಆಗುವ ಕಾಲಕ್ಕೆ ಪ್ರತಿವಾದಿ ನನ್ನಿಂದ ರೂ.1,36,000/- ಹಣವನ್ನು

ಪಡೆದುಕೊಂಡಿರುತ್ತಾರೆ.

ನವೆಂಬರ್ 2021 ರಂದು ರೂ.5 ಲಕ್ಷ ಹಣ ಕೊಟ್ಟಿದ್ದರ ನಿಖರವಾದ ದಿನಾಂಕ ನನಗೆ ಗೊತ್ತಿಲ್ಲ. ನಾನು ನಮ್ಮ ವಕೀಲರಿಗೆ ದಾವೆಯನ್ನು ಬರೆಯುವ ಕಾಲಕ್ಕೆ ನಿಖರವಾದ ತಾರಿಕು ಹೇಳಿರುತ್ತೇನೆ, ಆದರೆ ಈಗ ನೆನಪು ಇಲ್ಲ. ನಾನು ಜಿಲ್ಲಾ ಕಾಂಗ್ರೇಸ್ ಕಮಿಟಿಯಲ್ಲಿ ನಿಪಿ-1 ಆಗುವ ಕಾಲಕ್ಕೆ ನಾನು ಯಾವುದೇ ಉದ್ದೆಯಲ್ಲಿ ಇರಲಿಲ್ಲ. ನಾನು ದಾವಾ ಹಾಕುವ ಕಾಲಕ್ಕೆ ಜಿಲ್ಲಾ ಕಾಂಗ್ರೇಸ್ ಕಮಿಟಿಯ ಯುವ ಮೋರ್ಚಾ ಉಪಾಧ್ಯಕ್ಷೆ ಆಗಿದ್ದೆ. ನಾನು ಸುಮಾರು ವರ್ಷಗಳಿಂದ ಹಣಕಾಸಿನ ವ್ಯವಹಾರ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನನ್ನಿಂದ ಪಡೆದುಕೊಂಡ ಹಣವನ್ನು ಪ್ರತಿ ತಿಂಗಳು ಇಂತಿಷ್ಟು ಅಂತ ನನ್ನ ಬ್ಯಾಂಕ್ ಖಾತೆಗೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನನ್ನಿಂದ ಪಡೆದುಕೊಂಡ ಹಣವನ್ನು ಮರು ಪಾವತಿ ಅಂತ ಸುಮಾರು ರೂ.1,96,000/- ಹಣವನ್ನು ನೀಡಿರುತ್ತಾರೆ ಎಂದರೆ, ಸಾಕ್ಷಿ ಸದರಿ ಹಣವನ್ನು ಪ್ರತಿವಾದಿ ಹಾಕಿಲ್ಲ ಆತನ ಅಣ್ಣ ಶೇಶಾಂಕ ಸದರಿ ಹಣವನ್ನು ಹಾಕಿರುತ್ತಾರೆ, ನಿಪಿ-1ರ ವ್ಯವಹಾರಕ್ಕೂ ಮತ್ತು ಸದರಿ ಹಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದು ನುಡಿಯತ್ತಾರೆ.

ಪ್ರತಿವಾದಿ ಅಣ್ಣ ಶೇಶಾಂಕ ನನ್ನಿಂದ ಎಷ್ಟು ಹಣ ಪಡೆದಿದ್ದರು ಎಂದರೆ, ಸಾಕ್ಷಿ ಹಾಗೇ ಮೇಲಿಂದ ಮೇಲೆ ಅಡೆಚಣೆ ಇದ್ದಾಗ ರೂ.20-30 ಸಾವಿರ ಹಣವನ್ನು ಪಡೆಯತ್ತಿದ್ದರು, ನಂತರ ಮರು ಪಾವತಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನಾನು ಲೇವಾದೇವಿ ವ್ಯವಹಾರ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಯಾವುದೇ ಪರವಾನಿಗೆಯನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿ ನೀಡಿದ ರೂ.4 ಲಕ್ಷ ಹಣವನ್ನು ಎಲ್ಲಿಂದ ತಂದಿರೀ ಎಂದರೆ, ಸಾಕ್ಷಿ ಆಗ ನಾನು ಖಾಸಗಿ ನೌಕರಿ ಮಾಡುತ್ತಿದ್ದೆ ಹಾಗೂ ಎಲ್.ಐ.ಸಿ.ಯಲ್ಲಿ ಕೆಲಸ ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. ಉಳಿದ ರೂ.5 ಲಕ್ಷ ಹಣವನ್ನು ಎಲ್ಲಿಂದ ಕೊಟ್ಟಿರೀ ಎಂದರೆ, ಸಾಕ್ಷಿ ನನ್ನ ಮಾವ

ಹೊಲ ಮಾರಾಟ ಮಾಡಿದ್ದರದು, ಅದರಿಂದ ಬಂದ ಹಣವನ್ನು ನಮಗೆ ಕೊಟ್ಟಿದ್ದರು, ಆ ಹಣವನ್ನು ನಾನ ಪ್ರತಿವಾದಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಮಾವ ಎಷ್ಟು ಎಕರೆ ಜಮೀನನ್ನು, ಎಷ್ಟು ಲಕ್ಷಕ್ಕೆ ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆದರೆ ಹಣವನ್ನು ಮಾತ್ರ ಕೊಟ್ಟಿರುತ್ತಾರೆ. ನನ್ನ ಮಾವ ಆಳಂದ ತಾಲುಕಾ ಖೇಡ ಉರ್ಮಗಾ ಗ್ರಾಮದಲ್ಲಿರುವ ಜಮೀನನ್ನು ಮಾರಾಟ ಮಾಡಿರುತ್ತಾರೆ.

ನನ್ನ ಮಾವ ಮಾರಾಟ ಮಾಡಿದ ಜಮೀನಿನ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನಾನು ಪ್ರತಿವಾದಿಗೆ ಖಾತೆ ಮುಖಾಂತರ ಹಣ ವರ್ಗಾವಣೆ ಮಾಡಿರುವುದಿಲ್ಲ, ನಗದು ರೂಪದಲ್ಲಿ ಕೊಟ್ಟಿರುತ್ತೇನೆ. ರೂ.4 ಲಕ್ಷ ಕೊಡುವ ಕಾಲಕ್ಕೆ ರೇವಣಸಿದ್ದಪ್ಪ ರವರು ಹಾಜರು ಇದ್ದರು. ಸದರಿ ರೂ.4 ಲಕ್ಷ ಹಣವನ್ನು ನಾನು ನನ್ನ ಗಂಡ ಏಣಿಸಿಕೊಟ್ಟಿರುತ್ತೇವೆ. ಸಾಕ್ಷಿದಾರ ರೇವಣಸಿದ್ದಪ್ಪ ಸದರಿ ರೂ.4 ಹಣವನ್ನು ಎಣಿಸಿರುವುದಿಲ್ಲ. ಸದರಿ ರೂ.4 ಲಕ್ಷ ರೂ.500/- ಮುಖ ಬೆಲೆ ನೋಟುಗಳು ಇದ್ದವು. ಎಷ್ಟು ಬಂಡಲ್ ಇದ್ದವು ಎಂದು ನನಗೆ ಗೊತ್ತಿಲ್ಲ. ಸದರಿ ಹಣವನ್ನು ಬ್ಯಾಂಕಿನಿಂದ ಪಡೆದುಕೊಂಡು ಬಂದಿಲ್ಲ, ಮನೆಯಲ್ಲಿದ್ದ ಸ್ವಲ್ಪ ಹಣ ಕೂಡಿಸಿ ಕೊಟ್ಟಿರುತ್ತೇನೆ. ಬ್ಯಾಂಕಿನಿಂದ ಎಷ್ಟು ಹಣ ಪಡೆದುಕೊಂಡು ಬಂದಿರುತ್ತೇನೆ ಎಂದು ನನಗೆ ಗೊತ್ತಿಲ್ಲ, ಆದರೆ ರೂ.10-20 ಸಾವಿರ ಪಡೆದುಕೊಂಡು ಬಂದಿರಬಹುದು. ಸದರಿ ಹಣ ಬ್ಯಾಂಕಿನಿಂದ ತಂದ ಬಗ್ಗೆ ದಾಖಲೆ ಕೊಟ್ಟಿಲ್ಲ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**